<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 28 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಠೋಡ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 12.09.2022 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಬಿಪಿಎಲ್, ಅಂತೋದ್ಯಯ ಹಾಗೂ ಎಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಇರುವ ನಿಯಮಗಳೇನು; | ಭೂರಹಿತ ಕೃಷಿ ಕಾರ್ಮಿಕರು, ಅಂಚಿನ ಕೃಷಿಕರು, ಗ್ರಾಮೀಣ ಕುಶಲ ಕರ್ಮಿಗಳು ಅಂದರೆ ಮಡಿಕೆ ಮಾಡುವವರು ಚರ್ಮಕಾರರು, ನೇಕಾರರು, ಕಮ್ಮಾರರು, ಬಡಿಗಿಗಳು, ಕೊಳಚೆ ನಿವಾಸಿಗಳು ಮತ್ತು ವಿಧವೆಯರು ಮುಖ್ಯಸ್ಥರಾಗಿರುವ ಅಥವಾ ಸಂಪೂರ್ಣ ಅನಾರೋಗ್ಯಕ್ಕೆ ಒಳಗಾಗಿರುವ ವ್ಯಕ್ತಿಗಳು ಅಥವಾ ವಿಶೇಷ ಚೇತನರು ಅಥವಾ 60 ವರ್ಷ ತುಂಬಿದ ವ್ಯಕ್ತಿಗಳು ಅಥವಾ ನಿರ್ದಿಷ್ಟ ಜೀವನೋಪಾಯ ಮಾರ್ಗೋಪಾಯವಿಲ್ಲದ ಅಥವಾ ಸಾಮಾಜಿಕ ಬೆಂಬಲವಿಲ್ಲದ ಕುಟುಂಬಗಳಲ್ಲಿನ ಬಡವರಲ್ಲಿ ಅತಿ ಬಡವರಿಗೆ ಅಂತ್ಯೋದಯ ಪಡಿತರ ಚೀಟಿಯನ್ನು ನೀಡಲಾಗುತ್ತಿದೆ.<br><br>ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಯನ್ನು ಪಡೆಯಲು ಈ ಕೆಳಕಂಡಂತೆ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br><br>• ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br><br>• ಗ್ರಾಮೀಣ ಪ್ರದೇಶಗಲಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. |

<table>
<tr><td></td><td></td><td>• ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>• ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.<br>ಆದ್ಯತೇತರ ಪಡಿತರ ಚೀಟಿಗಳನ್ನು ಪಡೆಯಲು ಯಾವುದೇ ಮಾನದಂಡಗಳು ಇರುವುದಿಲ್ಲ. ರಾಜ್ಯದಲ್ಲಿರುವ ಯಾವುದೇ ಕುಟುಂಬಗಳು ಅದ್ಯತೇತರ ಪಡಿತರ ಚೀಟಿಯನ್ನು ಪಡೆಯಬಹುದಾಗಿರುತ್ತದೆ.</td></tr>
<tr><td>ಆ</td><td>ಬಿಪಿಎಲ್, ಅಂತ್ಯೋದ್ಯಯ ಹಾಗೂ ಎಪಿಎಲ್ ಪಡಿತರ ಚೀಟಿದಾರರಿಗೆ ನೀಡುತ್ತಿರುವ ಸೌಲಭ್ಯಗಳಾವುವು; ಅಂತಹ ಸೌಲಭ್ಯಗಳನ್ನು ಪಡೆದವರ ಸಂಖ್ಯೆ ಎಷ್ಟು;</td><td>ಪ್ರತಿ ತಿಂಗಳು ಅಂತ್ಯೋದಯ ಅನ್ನ ಯೋಜನೆಯ ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯ (ಅಕ್ಕಿ/ರಾಗಿ/ಜೋಳ) ಮತ್ತು ಆದ್ಯತಾ (ಪಿ.ಹೆಚ್.ಹೆಚ್.) ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ 05 ಕೆ.ಜಿ ಆಹಾರ ಧಾನ್ಯ (ಅಕ್ಕಿ/ರಾಗಿ/ಜೋಳ) ಉಚಿತವಾಗಿ ವಿತರಿಸಲಾಗುತ್ತಿದೆ. ಆದ್ಯತೇತರ (ಎಪಿಎಲ್) ಏಕಸದಸ್ಯ ಪಡಿತರ ಚೀಟಿಗೆ 05 ಕೆ.ಜಿ ಅಕ್ಕಿ ಮತ್ತು ಒಬ್ಬರಿಗಿಂತ ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿ ಪ್ರತಿ ಕೆ.ಜಿ ಗೆ ರೂ.15/- ರಂತೆ ಹಂಚಿಕೆ ನೀಡಲಾಗುತ್ತಿದೆ.<br>ಆಗಸ್ಟ್ 2022 ರ ಮಾಹೆಯ ಹಂಚಿಕೆಯನ್ವಯ ಪಡಿತರ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ.
<table>
<tr><th>ಪಡಿತರ ಚೀಟಿ ವರ್ಗ</th><th>ಪಡಿತರ ಚೀಟಿ ಸಂಖ್ಯೆ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>ಅಂತ್ಯೋದಯ</td><td>1092473</td><td>4499106</td></tr>
<tr><td>ಆದ್ಯತಾ</td><td>11609661</td><td>38855288</td></tr>
<tr><td>ಆದ್ಯತೇತರ</td><td>735897</td><td></td></tr>
</table></td></tr>
<tr><td>ಇ</td><td>ನಕಲಿ ಪಡಿತರ ಚೀಟಿಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ನಕಲಿ ಪಡಿತರ ಚೀಟಿ ಪಡೆದವರ ಸಂಖ್ಯೆ?</td><td>ರಾಜ್ಯ ಸರ್ಕಾರವು ರೂಪಿಸಿರುವ ಮಾನದಂಡಗಳಿಗೆ ವಿರುದ್ಧವಾಗಿ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಪಡೆದುಕೊಂಡವರ ವಿರುದ್ಧ ಕಾರಣಕೇಳಿ ನೋಟಿಸ್ ಜಾರಿ ಮಾಡಲು ಹಾಗೂ ಅಂತವರಿಂದ ದಂಡ ವಸೂಲಿ ಮಾಡಲು ಕ್ರಮವಹಿಸಲಾಗುತ್ತದೆ. ಹಾಗೂ ಅನರ್ಹರು ಹೊಂದಿರುವ ಅಂತ್ಯೋದಯ/ಆದ್ಯತಾ ಪಡಿತರ ಚೀಟಿಯನ್ನು ಆದ್ಯತೇತರ ಪಡಿತರ ಚೀಟಿಯನ್ನಾಗಿ ಪರಿವರ್ತಿಸಲಾಗಿದೆ ಅಥವಾ ರದ್ದುಪಡಿಸಲಾಗಿದೆ.</td></tr>
</table>

| | | |
|---|---|---|
| | | 30.01.2021 ರಿಂದ 31.08.2022 ದವರೆಗೆ ಒಟ್ಟು 3,34,487 ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರೂ. 12,85,27, 002/- ದಂಡವನ್ನು ವಸೂಲಿ ಮಾಡಲಾಗಿದೆ. |

**ಆನಾಸ 151 ಡಿಆರ್ಎ 2022 (ಇ-ಆಫೀಸ್)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ